ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
**Karnataka State Road Transport Corporation**

**ಲೆಕ್ಕಪತ್ರ ಶಾಖೆ**
Accounts Department

ಸಾರಿಗೆ ಭವನ, ಶಾಂತಿನಗರ, ಬೆಂಗಳೂರು – 560 027
ದೂರವಾಣಿ / ಫ್ಯಾಕ್ಸ್ ಸಂಖ್ಯೆ : 080-22239449

Transport House, Shanthinagar, Bangalore -560 027
Telephone / Fax No. : 080 - 22239449

ಸಂಖ್ಯೆ:ಕರಾಸಾ/ಕೇಕ/ಲೆಪ/ಪಾವತಿ/1007/25-26 ದಿನಾಂಕ: 26.06.2025.

**ಸುತ್ತೋಲೆ ಸಂಖ್ಯೆ– 04/2025**

(ಲೆಕ್ಕಪತ್ರ ಇಲಾಖೆಯಿಂದ ಹೊರಡಿಸಲಾಗಿದೆ)

**ವಿಷಯ:** ದಿನಾಂಕ 01.07.2022 ರಲ್ಲಿದ್ದ ಶೇ 31 ರಷ್ಟು ತುಟ್ಟಿಭತ್ಯೆಯನ್ನು 01 ನೇ ಆಗಸ್ಟ್ 2024 ರಿಂದ ಜಾರಿಗೆ ಬರುವಂತೆ ಮೂಲ ತುಟ್ಟಿಭತ್ಯೆಯನ್ನಾಗಿ ಪರಿಗಣಿಸುವ ಮತ್ತು ಮಂಜೂರು ಮಾಡಿರುವ ಮನೆ ಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆ ದರಗಳನ್ನು ಸಂಸ್ಥೆಯಲ್ಲಿ ಅಳವಡಿಸಿಕೊಳ್ಳುವ ಕುರಿತು.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ: No FD 21 SRP 2024, DT 22.07.2024.
2. ಸರ್ಕಾರದ ಆದೇಶ ಸಂಖ್ಯೆ: No FD 21 SRP 2024, DT 23.08.2024.

1. ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ ಆಇ21 ಎಸ್ಆರ್‌ಪಿ 2024 ಬೆಂಗಳೂರು, ದಿನಾಂಕ 23 ನೇ ಆಗಸ್ಟ್ 2024 ರಲ್ಲಿ ತನ್ನ ನೌಕರರಿಗೆ ದಿನಾಂಕ 01.07.2022 ರಲ್ಲಿದ್ದ ಶೇ.31 ರಷ್ಟು ತುಟ್ಟಿಭತ್ಯೆಯನ್ನು ಮೂಲ ವೇತನಕ್ಕೆ ವಿಲೀನಗೊಳಿಸಿ ಸರ್ಕಾರಿ ನೌಕರರ ವೇತನವನ್ನು ಹಾಗೂ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆ ಮತ್ತು ಇತರೇ ಭತ್ಯೆಗಳ ದರಗಳನ್ನು ಪರಿಷ್ಕರಿಸಿ 01 ನೇ ಆಗಸ್ಟ್ 2024 ರಿಂದ ಆರ್ಥಿಕ ಸೌಲಭ್ಯ ಜಾರಿಗೆ ಬರುವಂತೆ ಆದೇಶಿಸಿರುತ್ತದೆ.

2. ಕೈಗಾರಿಕಾ ಒಪ್ಪಂದದ ಪ್ರಕಾರ ಸಾರಿಗೆ ನಿಗಮಗಳಲ್ಲಿ ಸಹ ಸರ್ಕಾರದಲ್ಲಿ ಕಾಲಕಾಲಕ್ಕೆ ಮಂಜೂರಾಗುವ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆ ದರಗಳನ್ನು ಅದೇ ದರಗಳಲ್ಲಿ ಹಾಗೂ ಅದೇ ದಿನಾಂಕದಿಂದ ಅನ್ವಯಿಸಿ ಪಾವತಿಸಬೇಕಾಗಿರುವುದರಿಂದ, ಮೇಲ್ಕಂಡಂತೆ ಶೇ 31 ರಷ್ಟು ತುಟ್ಟಿಭತ್ಯೆಯನ್ನು, ಮೂಲ ತುಟ್ಟಿಭತ್ಯೆಯನ್ನಾಗಿ ನಿಗದಿಪಡಿಸಲು ಹಾಗೂ ಕೆಳಕಂಡಂತೆ ಪರಿಷ್ಕರಿಸಿರುವ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆ ದರಗಳನ್ನು 01 ನೇ ಆಗಸ್ಟ್ 2024 ರಿಂದ ಜಾರಿಗೊಳಿಸಲು ಆದೇಶಿಸಲಾಗಿದೆ.

3. ಸರ್ಕಾರದ ಆದೇಶದ ಕಂಡಿಕೆ (5) ರ ಅಂಕಣ (3) ರಲ್ಲಿ ಆದೇಶಿಸಿರುವಂತೆ ದಿನಾಂಕ 01.07.2022 ರಿಂದ ಅನ್ವಯವಾಗುವಂತೆ ತುಟ್ಟಿಭತ್ಯೆಯನ್ನು ಕಾಲ್ಪನಿಕವಾಗಿ ಈ ಕೆಳಕಂಡಂತೆ ಕ್ರಮಬದ್ಧಗೊಳಿಸಲಾಗಿದೆ.

| ಕ್ರ.ಸಂ | ದಿನಾಂಕದಿಂದ ಜಾರಿ | ಶೇಕಡಾವಾರು |
|---|---|---|
| 01 | 01.07.2022 | ಶೂನ್ಯ |
| 02 | 01.01.2023 | ಶೇ 2.75 |
| 03 | 01.07.2023 | ಶೇ 5.50 |
| 04 | 01.01.2024 | ಶೇ 8.50 |

4. ಸರ್ಕಾರದ ಪ್ರಸ್ತುತ ಆದೇಶಗಳ ಪ್ರಕಾರ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯ ಉದ್ದೇಶಕ್ಕಾಗಿ ನಗರಗಳು ಮತ್ತು ಇತರೇ ಸ್ಥಳಗಳ ವರ್ಗೀಕರಣವು ಮುಂದಿನ ಆದೇಶದವರೆಗೆ ಮುಂದುವರೆದು ಅನ್ವಯಿಸತಕ್ಕದ್ದು. ಅದರಂತೆ 01.08.2024 ರಿಂದ ಅನ್ವಯಿಸುವಂತೆ ಮನೆ ಬಾಡಿಗೆ ಭತ್ಯೆಯ ವಿವಿಧ ದರಗಳನ್ನು ಸರ್ಕಾರಿ ಆದೇಶದ ಕಂಡಿಕೆ (7) ರ ಅಂಕಣ (1) ರಂತೆ ಕೆಳಕಂಡಂತೆ ಬದಲಾವಣೆಗೊಳ್ಳುತ್ತವೆ.

| ಜನಸಂಖ್ಯೆ | ವರ್ಗೀಕರಣ | ಮನೆಬಾಡಿಗೆ ಭತ್ಯೆಯ ದರಗಳು |
|---|---|---|
| 25 ಲಕ್ಷ ಮತ್ತು ಅದಕ್ಕೂ ಹೆಚ್ಚು | ಎ | ಶೇ.20 ರಷ್ಟು |
| 5 ಲಕ್ಷ ಮತ್ತು ಅದಕ್ಕೂ ಹೆಚ್ಚು ಆದರೆ 25 ಲಕ್ಷ ಮೀರದಂತೆ | ಬಿ | ಶೇ.15 ರಷ್ಟು |
| 5 ಲಕ್ಷಕ್ಕಿಂತ ಕಡಿಮೆ | ಸಿ | ಶೇ.7.5 ರಷ್ಟು |

ಮನೆಬಾಡಿಗೆ ಭತ್ಯೆ ಮಂಜೂರಾತಿಗೆ ಸಂಬಂದಿಸಿದಂತೆ ದಿನಾಂಕ 19.10.2012 ರ ಸರ್ಕಾರಿ ಆದೇಶ ಸಂಖ್ಯೆ:ಆಇ18 ಎಸ್ಆರ್‌ಪಿ 2012 ರಲ್ಲಿ ವಿಧಿಸಲಾದ ಇತರೆ ಎಲ್ಲಾ ಷರತ್ತುಗಳು ಮುಂದುವರೆದು ಅನ್ವಯಿಸುತ್ತವೆ.

5. ಸರ್ಕಾರಿ ಆದೇಶದ ಕಂಡಿಕೆ (8) ರ ಅಂಕಣ (1) ರಂತೆ ಈ ಕೆಳಗಿನ ತಖ್ತೆ:ಯಲ್ಲಿ ನಮೂದಿಸಿರುವ ನಗರಗಳು /ಪಟ್ಟಣಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವರ್ಗದ ನೌಕರರಿಗೆ/ಅಧಿಕಾರಿಗಳಿಗೆ ಲಭ್ಯವಿರುವ ನಗರ ಪರಿಹಾರ ಭತ್ಯೆಯು ಅವುಗಳ ಮುಂದೆ ನಮೂದಿಸಿ ನಿಗದಿಪಡಿಸಿರುವ ದರಗಳಲ್ಲಿ 01ನೇ ಆಗಸ್ಟ್ 2024 ರಿಂದ ಜಾರಿಗೊಳಿಸತಕ್ಕದ್ದು.

| ನಗರ/ಇತರ ಸ್ಥಳಗಳು | ಸರ್ಕಾರಿ ನೌಕರನು ಸೇರಿದ ಗುಂಪು | ನಗರ ಪರಿಹಾರ ಭತ್ಯೆಯ ದರ |
|---|---|---|
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಎ & ಬಿ<br>ಸಿ & ಡಿ | ರೂ. 900.00<br>ರೂ. 750.00 |
| ಬೆಳಗಾವಿ(ಯು.ಎ.)<br>ಹುಬ್ಬಳ್ಳಿ-ಧಾರವಾಡ<br>ಮಂಗಳೂರು(ಯು.ಎ)<br>ಮೈಸೂರು(ಯು.ಎ.)<br>ಕಲಬುರಗಿ | ಎ & ಬಿ<br>ಸಿ & ಡಿ | ರೂ. 700.00<br>ರೂ. 600.00 |

Continuation Sheet................

6. ಪ್ರಯುಕ್ತ ದಿನಾಂಕ 01.08.2024 ರಂದು ನಿಗಮದ ಸೇವೆಯಲ್ಲಿದ್ದಂತಹ ಪ್ರತಿ ಅಧಿಕಾರಿ/ನೌಕರರಿಗೆ ಕಾಲ್ಪನಿಕವಾಗಿ ನಿಗದಿಪಡಿಸಿರುವಂತೆ ದಿನಾಂಕ 01.07.2022 ರ ಮೂಲವೇತನದ ಮೇಲೆ ಶೇ.31 ರಷ್ಟನ್ನು ಮೂಲತುಟ್ಟಿಭತ್ಯೆಯನ್ನಾಗಿ ನಿಗದಿಗೊಳಿಸಿ (50 ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ಭಿನ್ನಾಂಕಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಹಾಗೂ 50 ಪೈಸೆಗಿಂತ ಕಡಿಮೆ ಭಿನ್ನಾಂಕಗಳನ್ನು ಕಡೆಗಣಿಸತಕ್ಕದ್ದು) ಈ ಮೊತ್ತವನ್ನು ಸ್ಪಷ್ಟವಾಗಿ ಅವರ ಸೇವಾ ಪುಸ್ತಕದಲ್ಲಿ ನಮೂದಿಸಿ ಆಡಳಿತಾಧಿಕಾರಿ/ಸಹಾಯಕ ಆಡಳಿತಾಧಿಕಾರಿಯವರಿಂದ ದೃಡೀಕರಿಸತಕ್ಕದ್ದು ಹಾಗೂ ಈ ನಡಾವಳಿ/ದಾಖಲಾತಿಯನ್ನು ಸಂಬಂಧಿತ ವಿಭಾಗದ ಲೆಕ್ಕಾಧಿಕಾರಿ/ಸಹಾಯಕ ಲೆಕ್ಕಾಧಿಕಾರಿಯವರಿಂದ ಅಡಿಟ್ ಮಾಡಿಸತಕ್ಕದ್ದು. ತದನಂತರ ಆಯಾ ಅಧಿಕಾರಿ/ನೌಕರರಿಗೆ ಲಭ್ಯವಾಗುವ ಮೂಲತುಟ್ಟಿಭತ್ಯೆಯನ್ನು ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಅಳವಡಿಸಲು ಆಡಳಿತ ಇಲಾಖೆಯಿಂದ ಅಗತ್ಯ ಕ್ರಮಕೈಗೊಳ್ಳುವುದು.

7. ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಗೆ ಸಂಬಂದಪಟ್ಟಂತೆ ದಿನಾಂಕ 01.08.2024 ರಿಂದ ಅನ್ವಯವಾಗುವಂತೆ ಸುತ್ತೋಲೆ ಕ್ರಮ ಸಂಖ್ಯೆ (4) ಮತ್ತು (5) ರಲ್ಲಿ ನೀಡಿರುವ ದರಗಳನ್ನು ಅನ್ವಯವಾಗುವ ನಗರ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ಸೀಮಿತಗೊಳಿಸಿದಂತೆ ಪ್ರಸ್ತುತ ಮೂಲ ವೇತನ ಹಾಗೂ ದಿನಾಂಕ 01.07.2022 ರ ಮೂಲ ವೇತನ ಮೊತ್ತದ ಮೇಲೆ ನಿಗದಿಗೊಳಿಸಲಾದ ಶೇ 31 ರ ಮೂಲ ತುಟ್ಟಿಭತ್ಯೆಯ ಒಟ್ಟು ಮೊತ್ತದ ಮೇಲೆ ಲೆಕ್ಕಾಚಾರ ಮಾಡಿ **ಜುಲೈ-2025** ರ ಮಾಹೆಯ ವೇತನದಿಂದ ಮತ್ತು ಮುಂದಕ್ಕೆ ಪಾವತಿಸುವುದು ಹಾಗೂ ಆಗಸ್ಟ್-2024 ರಿಂದ **ಜೂನ್-2025** ರವರೆಗಿನ **11** ತಿಂಗಳ ವ್ಯತ್ಯಾಸವನ್ನು ಪ್ರತ್ಯೇಕವಾಗಿ ಲೆಕ್ಕಾಚಾರ ಮಾಡುವುದು.

8. **ಜುಲೈ-2025** ರಿಂದ ಮತ್ತು ಮುಂದಕ್ಕೆ ಸಂಸ್ಥೆಯಲ್ಲಿ ನಿವೃತ್ತರಾಗುವ ಮತ್ತು ರಾಜಿನಾಮೆ, ಮರಣ, ವಜಾ ಮುಂತಾದ ಪ್ರಕರಣಗಳಲ್ಲಿ ಪಾವತಿಸಲಾಗುವ ಉಪದಾನ ಮೊತ್ತವನ್ನು ಲೆಕ್ಕಾಚಾರ ಮಾಡಲು ಸೇವಾಂತ್ಯದ ದಿನಾಂಕದಂದು ಇರುವ ಮೂಲ ವೇತನ ಮೊತ್ತಕ್ಕೆ ಮೇಲ್ಕಂಡಂತೆ ನಿಗದಿಗೊಳಿಸಲಾದ ಶೇ 31 ರ ಮೂಲ ತುಟ್ಟಿಭತ್ಯೆಯ ಮೊತ್ತವನ್ನು ಕೂಡಿಸಿ ಉಪದಾನ ಮೊತ್ತವನ್ನು ಉಪದಾನ ಕಾಯ್ದೆ 1972 ಅಥವಾ ಸಂಸ್ಥೆಯ ಉಪದಾನ ನಿಯಮಾವಳಿ ಅನ್ವಯ ಲೆಕ್ಕಾಚಾರ ಮಾಡಿ ಇವುಗಳಲ್ಲಿ ಉದ್ಯೋಗಿಗೆ ಯಾವುದು ಲಾಭದಾಯಕವಾಗುವುದೋ ಆ ಮೊತ್ತವನ್ನು (ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ಉಪಧನ ಸುತ್ತೋಲೆಗಳನ್ವಯ) ಪಾವತಿ ಮಾಡುವುದು (1972 ರ ಉಪದಾನ ಕಾಯ್ದೆಯ ಕಡ್ಡಾಯವಾಗಿ ಅನ್ವಯಿಸುವ ಉದ್ಯೋಗಿಗಳನ್ನು ಹೊರತುಪಡಿಸಿ)

9. **ಜುಲೈ-2025** ರಿಂದ ಮುಂದಕ್ಕೆ ಗಳಿಕೆ ರಜೆ ನಗದೀಕರಣ ಮೊತ್ತವನ್ನು ಸೇವೆಯಲ್ಲಿ ಮುಂದುವರೆದ ಹಾಗೂ ಸೇವಾಂತ್ಯಗೊಂಡ ಪ್ರಕರಣಗಳಲ್ಲಿ ಪಾವತಿ ಮಾಡುವಾಗ ಮೂಲ ತುಟ್ಟಿಭತ್ಯೆಯನ್ನು ಮೂಲ ವೇತನದೊಂದಿಗೆ ಕೂಡಿಸಿ ಲೆಕ್ಕಾಚಾರ ಮಾಡುವುದು.

10. ಕರಾರಸಾ ನಿಗಮದಲ್ಲಿ ಆಗಸ್ಟ್-2024 ರಿಂದ **ಜೂನ್-2025** ರವರೆಗಿನ ಮಾಹೆಗಳಲ್ಲಿ ಸೇವಾ ನಿರತ ಮತ್ತು ಸೇವಾ ವಿಮುಕ್ತಿ ಹೊಂದಿದವರಿಗೆ ಮೂಲತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ/ನಗರ ಪರಿಹಾರ ಭತ್ಯೆಗಳ ನಿಗದಿಯಿಂದ ಉಂಟಾಗುವ ವ್ಯತ್ಯಾಸಗಳನ್ನು ಲೆಕ್ಕಾಚಾರಗೊಳಿಸಿ ಪಾವತಿಸಲು ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

11. ಸಹೋದರ ಸಂಸ್ಥೆಗಳಾದ ಬೆಂಮನಸಾ/ವಾಕರಸಾ/ಕಕರಸಾ ಸಂಸ್ಥೆಗಳು ಹಿಂಬಾಕಿ ಪಾವತಿಯ ಕುರಿತು ಆಯಾ ಸಂಸ್ಥೆಗಳು ಆರ್ಥಿಕ ಪರಿಸ್ಥಿತಿಗನುಗುಣವಾಗಿ ನಿರ್ಧರಿಸುವುದು.
12. ಈ ಮೇಲಿನಂತೆ **ಜುಲೈ-2025** ರ ವೇತನದಲ್ಲಿ ಮತ್ತು ಮುಂದಕ್ಕೆ ಪಾವತಿಸಬೇಕಾಗಿರುವ ಪರಿಷ್ಕೃತ ಮನೆ ಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆ ದರಗಳು ಎಲ್ಲಾ ಅಧಿಕಾರಿ ಮತ್ತು ನೌಕರರಿಗೂ ಸಹ ಅನ್ವಯವಾಗಲಿದ್ದು, ಈ ಕಛೇರಿಯಿಂದ ಪರಿಷ್ಕೃತ ವೇತನ ಪಟ್ಟಿಗಳನ್ನು ನಿರೀಕ್ಷೆ ಮಾಡದೇ ಮೇಲ್ಕಂಡಂತೆ ವೇತನ ಪಾವತಿಗೆ ಕ್ರಮ ತೆಗೆದುಕೊಳ್ಳುವುದು.

ಈ ಸುತ್ತೋಲೆ ತಲುಪಿದ್ದಕ್ಕೆ ಸ್ವೀಕೃತಿಯನ್ನು ಕಳುಹಿಸುವುದು ಹಾಗೂ ಈ ವಿಷಯದಲ್ಲಿ ತೆಗೆದುಕೊಂಡ ಕ್ರಮದ ಬಗ್ಗೆ ಅನುಷ್ಠಾನ ವರದಿ ಕಳುಹಿಸುವುದು.

ವ್ಯವಸ್ಥಾಪಕ ನಿರ್ದೇಶಕರು
ಕರಾರಸಾ ನಿಗಮ:ಬೆಂಗಳೂರು

ಪ್ರತಿಯನ್ನು:-

1. ವ್ಯವಸ್ಥಾಪಕ ನಿರ್ದೇಶಕರು, ಬೆಂಮನಸಾ ಸಂಸ್ಥೆ/ ವಾಕರಸಾ ಸಂಸ್ಥೆ/ ಕಕರಸಾ ಸಂಸ್ಥೆ ರವರುಗಳ ಮಾಹಿತಿಗಾಗಿ.
2. ನಿರ್ದೇಶಕರು (ಸಿ ಮತ್ತು ಜಾ)/ ನಿರ್ದೇಶಕರು (ಮಾಹಿತಿ ತಂತ್ರಜ್ಞಾನ), ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
3. ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು, ರವರುಗಳ ಮಾಹಿತಿಗಾಗಿ ಹಾಗೂ ತಮ್ಮ ಇಲಾಖೆಯ ಅಧೀನ ನೌಕರರ ಮೂಲತುಟ್ಟಿಭತ್ಯೆಯನ್ನು ನಿಗದಿಗೊಳಿಸಲು ಹಾಗೂ ಹೆಚ್.ಆರ್.ಎಂ ಎಸ್ ತಂತ್ರಾಂಶದಲ್ಲಿ ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳಲು.
4. ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿಗಳು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು, ರವರ ಮಾಹಿತಿಗಾಗಿ ಹಾಗೂ ನಿಗಮದ ನೊಂದಾಯಿತ ಕಾರ್ಮಿಕ ಸಂಘಟನೆಗಳಿಗೆ ಸುತ್ತೋಲೆ ಪ್ರತಿಯನ್ನು ಕಳುಹಿಸಲು ಅಗತ್ಯ ಕ್ರಮಕೈಗೊಳ್ಳಲು.
5. ವ್ಯವಸ್ಥಾಪಕ ನಿರ್ದೇಶಕರು, ಕರಾರಸಾ ನಿಗಮ, ರವರ ಹಿರಿಯ ಆಪ್ತ ಕಾರ್ಯದರ್ಶಿ ರವರ ಮಾಹಿತಿಗಾಗಿ.
6. ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ, ಬೆಂಮನಸಾಸಂಸ್ಥೆ /ವಾಕರಸಾಸಂಸ್ಥೆ/ ಕಕರಸಾಸಂಸ್ಥೆ, ಬೆಂಗಳೂರು/ಹುಬ್ಬಳ್ಳಿ/ಕಲಬುರಗಿ ರವರ ಮಾಹಿತಿಗಾಗಿ.
7. ಎಲ್ಲಾ ಹಿರಿಯ/ ವಿಭಾಗ ನಿಯಂತ್ರಣಾಧಿಕಾರಿಗಳು/ ಕಾರ್ಯ ವ್ಯವಸ್ಥಾಪಕರು, ಕರಾರಸಾ ನಿಗಮ. ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಕಾರ್ಯ ನಿರ್ವಾಹಕ ಅಭಿಯಂತರರು, ಕಾಮಗಾರಿ ವಿಭಾಗ ಹಾಸನ, ಮೈಸೂರು, ಬೆಂಗಳೂರು, ತುಮಕೂರು ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಉಪ ಮುಖ್ಯ ಲೆಕ್ಕಾಧಿಕಾರಿ (ಆಂಲೆಪ), ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು. ರವರುಗಳ ಮಾಹಿತಿಗಾಗಿ.
10. ನಿವಾಸಿ ಲೆಕ್ಕ ಪರಿಶೋಧಕರು, ಕರಾರಸಾ ಸಂಸ್ಥೆ, ಕೇಂದ್ರ ಕಛೇರಿ ಬೆಂಗಳೂರು ರವರ ಮಾಹಿತಿಗಾಗಿ.

ಮುಖ್ಯಲೆಕ್ಕಾಧಿಕಾರಿ ಹಾಗೂ ಆ.ಸ
ಕರಾರಸಾ ನಿಗಮ: ಕೇಂದ್ರ ಕಛೇರಿ. 26/6